ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮುಂಬರುವಂತಹ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಶೀಘ್ರದಲ್ಲಿ ಇಂತಹ ಯೋಜನೆಯನ್ನು ತರುತ್ತೇನೆಂದು ಮಾತು ಕೊಟ್ಟಿದ್ದಾರೆ.

ಆ) ತಡೆಹಿಡಿಯಲಾದ ಪ್ರಶ್ನೆ :

ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ: 46 (736)

ಆಶ್ರಯ ಶಾಲೆಗಳ ಸಮಸ್ಯೆಗಳು

736 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನ ಆಶ್ರಯ ಶಾಲೆಗಳು ಎಷ್ಟು ಮತ್ತು ಯಾವುವು;

ಆ) ಈ ಆಶ್ರಯ ಶಾಲೆಗಳಲ್ಲಿ, ಒದುತ್ತಿರುವ ಮಕ್ಕಳ ಸಂಖ್ಯೆ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಹಾಗೂ ಇವರಿಗೆ ನಿಗಧಿ ಪಡೆಸಿರುವ ವೇತನ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಣೆ ನೀಡುವುದು;

ಇ) ಈ ಆಶ್ರಯ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ, ಅಗತ್ಯ ವಸ್ತುಗಳ ಪೂರೈಕೆ (ಆಹಾರ, ಪಠ್ಯಪುಸ್ತಕ, ಸಮವಸ್ತ್ರ, ಇತ್ಯಾದಿಗಳನ್ನು ಯಾವ ರೀತಿ ಮಾಡಲಾಗುತ್ತಿದೆ ಮತ್ತು ಇವುಗಳಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಪಾತ್ರವೇನು;

ಈ) ಈ ಪ್ರಕ್ರಿಯೆಯನ್ನು ಹೊರ ಮಾನವ ಸಂಪನ್ನಮೂಲ ಸರಬರಾಜು ಮುಖಾಂತರ (ಹೊರಗುತ್ತಿಗೆ) ಮತ್ತು ಅಗತ್ಯ ವಸ್ತುಗಳ ಪೂರೈಕೆಯನ್ನು ಟೆಂಡರ್ ಮುಖಾಂತರ ಖಾಸಗಿಯವರಿಗೆ ಮಾಡಲಾಗಿದ್ದರೆ ಯಾರಿಗೆ ಮತ್ತು ಹೇಗೆ ನೀಡಲಾಗಿದೆ. (ವಿವರ ನೀಡುವುದು);

ಉ) ಹುಣಸೂರು ತಾಲ್ಲೂಕಿನ ಆಶ್ರಯ ಶಾಲೆಗಳಿಗೆ ಆಡಳಿತಾತ್ಮಕ ನಿರ್ವಹಣೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಿರುವ ಅನುದಾನ ಎಷ್ಟು ಮತ್ತು ಯಾವುದಕ್ಕೆ ಖರ್ಚು ಮಾಡಲಾಗಿದೆ. (ಸಂಪೂರ್ಣ ವಿವರ ನೀಡುವುದು)?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ಆಶ್ರಮ ಶಾಲೆಗಳ ವಿವರ ಈ ಕೆಳಕಂಡಂತಿದೆ.

1) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ– ಐದು– ವಿವರಗಳು– 1) ನಲ್ಲೂರು ಪಾಲ 2) ವೀರನ ಹೊಸಹಳ್ಳಿ 3) ಕೊಳವಿಗೆ 4) ನೇರಳಕುಪ್ಪೆ 5) ನಾಗಾಪುರ

2) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ–ಒಂದು–ವಿವರಗಳು– 1) ಪೆಂಜಹಳ್ಳಿ ಗ್ರಾಮ (ಬುಂಡೇ ಬೆಸ್ತರ ಕಾಲೋನಿ)

ಆ) ಈ ಆಶ್ರಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿವರ :

1) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ – 729

2) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ – 50

ಸಿಬ್ಬಂದಿ ವಿವರ :

1) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ– 29 ಬೋಧಕ ಸಿಬ್ಬಂದಿ ಮಂಜೂರಾಗಿದ್ದು ಅದರಲ್ಲಿ 8 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಖಾಲಿ ಇರುವ 21 ಹುದ್ದೆಗಳನ್ನು ಹೊರಸಂಪನ್ಮೂಲದಿಂದ ನೇಮಕ ಮಾಡಿಕೊಳ್ಳ ಲಾಗಿದೆ. ಇವರಿಗೆ ಮಾಹೆಯಾನ 3329/– ರೂ ವೇತನ ಪಾವತಿಸಲಾಗುತ್ತಿದೆ. ಹಾಗೂ ಅಡುಗೆಯವರು ತ್ತು ಅಡುಗೆ ಸಹಾಯಕರ 25 ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 13 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಹಾಗೂ 12 ಹುದ್ದೆಗಳನ್ನು ಹೊರಸಂಪನ್ಮೂಲದಿಂದ ನೇಮಕ ಮಾಡಿಕೊಳ್ಳಲಾಗಿದೆ. ಇದರಲ್ಲಿ ಅಡುಗೆಯವರಿಗೆ ಮಾಹೆಯಾನ 4,250/– ರೂ, ಅಡುಗೆ ಸಹಾಯಕರಿಗೆ ಮಾಹೆಯಾನ 4,050/– ವೇತನ ಪಾವತಿಸಲಾಗುತ್ತಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಖೆ– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಡೆಸುತ್ತಿರುವ ಒಂದು ಆಶ್ರಮ ಶಾಲೆಯಲ್ಲಿ 50 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಇಲ್ಲಿ ಒಬ್ಬ ಉಪಾಧ್ಯಾಯರು ದಿನಗೂಲಿ ಆಧಾರದ ಮೇಲೆ ಬೋಧನೆ ಹಾಗೂ ಶಾಲೆ ನಿರ್ವಹಣೆ ಕೆಲಸ ನಿರ್ವಹಿಸುತ್ತಿದ್ದಾರೆ ಇವರಿಗೆ ಮಾಸಿಕ 2,810/ರೂ ವೇತನ ಪಾವತಿಸ ಲಾಗುತ್ತಿದೆ. ಹೊರಸಂಪನ್ಮೂಲದಿಂದ ಒಬ್ಬ ಅಡುಗೆಯವರನ್ನು ಹಾಗು

ಅಡುಗೆ ಸಹಾಯಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇವರಿಗೆ ಕ್ರಮವಾಗಿ ಮಾಸಿಕ 4,040/–ರೂ ಹಾಗೂ 3,849.30/–ರೂ ನಂತೆ ವೇತನವನ್ನು ಹೊರಗುತ್ತಿಗೆ ಮೇಲೆ ಪಾವತಿಸಲಾಗಿದೆ

ಇ) **1) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :** ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಡೆಸುತ್ತಿರುವ ಆಶ್ರಮ ಶಾಲೆಗಳಿಗೆ ಖಾಲಿ ಇರುವ ಶಿಕ್ಷಕರನ್ನು ಹೊರಗುತ್ತಿಗೆ ಮೇಲೆ ಎಜನ್ಸಿದಾರರಿಂದ ಭರ್ತಿ ಮಾಡಲು ಟೆಂಡರ್ ಕರೆಯಲಾಗಿದ್ದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಟೆಂಡರ್ ಎಜನ್ಸಿಯವರನ್ನು ಆಯ್ಕೆ ಮಾಡಲಾಗಿದ್ದು ಅದರಲ್ಲಿ ಹೊರಗುತ್ತಿಗೆ ಟೆಂಡರ್ ಅನ್ನು ಮೆ: ಕಾಂತಿ ಎಜನ್ಸಿ ನೆಟ್‌ವರ್ಕ್ಸ್ ಇವರಿಗೆ ನೀಡಲಾಗಿದೆ. ಸಮವಸ್ತ್ರಗಳ ಪೂರೈಕೆಗೆ ಟೆಂಡರ್ ಮೂಲಕ ಮೆ:ಸಿದ್ದೇಶ್ವರ ಎಂಟರ್‌ಪ್ರೈಸ್ ರಾಜಾಜಿನಗರ ಬೆಂಗಳೂರು ಇವರಿಗೆ ಸರಬರಾಜು ಆದೇಶ ನೀಡಲಾಗಿದೆ. ಆಹಾರ ಪದಾರ್ಥಗಳನ್ನು ನೇರವಾಗಿ ಕೊಟೇಷನ್ ಕರೆದು ಖರೀದಿಸಲಾಗುತ್ತಿದೆ ಇದಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ಪರಿಶೀಲಿಸಿ ಮೇಲು ಸಹಿಗಾಗಿ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕಳುಹಿಸುತ್ತಾರೆ. ಇಂತಹ ಬಿಲ್ಲುಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಮೇಲು ಸಹಿ ಮಾಡುತ್ತಾರೆ.

2) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ : ಈ ಇಲಾಖೆಯು ನಡೆಸುತ್ತಿರುವ ಒಂದು ಆಶ್ರಮ ಶಾಲೆಯಲ್ಲಿ ಎರಡು ಉಪಾಧ್ಯಾಯರ ಹುದ್ದೆ ಮಂಜೂರಾಗಿದ್ದು ಒಂದು ಹುದ್ದೆಯನ್ನು ರದ್ದು ಪಡೆಸಲಾಗಿದೆ. ಒಂದು ಹುದ್ದೆಯಲ್ಲಿ ದಿನಗೂಲಿ ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ. ಈ ಆಶ್ರಮ ಶಾಲೆಗೆ ಆಹಾರ ಸಾಮಗ್ರಿಯನ್ನು ಸ್ಥಳೀಯವಾಗಿ ಕೋಟೇಷನ್ ಕರೆದು ಅಶ್ವಿನಿ ಎಂಟರ್ ಪ್ರೈಸಸ್ ಇವರಿಂದ ಖರೀದಿಸಲಾಗುತ್ತಿದೆ. ತರಕಾರಿಯನ್ನು ಕೊಟೇಷನ್ ಕರೆದು ಅರ್ಜುನ್ ಎಂಟರ್ ಪ್ರೈಸಸ್ ಹುಣಸೂರು ಇವರಿಂದ ಖರೀದಿಸಲಾಗುತ್ತಿದೆ. ಹಾಗೂ ಪಠ್ಯಪುಸ್ತಕಗಳನ್ನು ಸ್ಥಳೀಯವಾಗಿ ಖರೀದಿಸಿ ವಿತರಿಸಲಾಗಿದೆ. ಸಮವಸ್ತ್ರಗಳನ್ನು ಜಿಲ್ಲಾ ಹಂತದಲ್ಲಿ ಟೆಂಡರ್ ಕರೆದು ಕರ್ನಾಟಕ ಗ್ರಾಮೀಣಾಭಿವೃದ್ಧಿ ಸೊಸೈಟಿ, ಸಿರಾ ಇವರಿಂದ ಪ್ರತಿ ವಿದ್ಯಾರ್ಥಿಗೆ ಎರಡು ಟೆರಿಕಾಟ್ ಸಮವಸ್ತ್ರ ಖರೀದಿಸಿ ವಿತರಿಸಲಾಗಿದೆ.

ಈ) ಮೇಲೆ ನೀಡಿದಂತೆ.

ಉ) ವಿವರಗಳು ಈ ರೀತಿ ಇದೆ:

1) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

(ರೂ. ಲಕ್ಷಗಳಲ್ಲಿ)

ವರ್ಷ	ವೇತನ	ವೇತನೇತರ	ಒಟ್ಟು
2006–07	14.80	28.00	42.80
2007–08	18.98	33.82	52.80
2008–09	25.27	50.50	75.77

ಈ ಅನುದಾನವನ್ನು ಖಾಯಂ ನೌಕರರ ವೇತನ ಆಹಾರ ಸಾಮಗ್ರಿ, ಸಮವಸ್ತ್ರ, ಲೇಖನ ಸಾಮಗ್ರಿ, ಪಠ್ಯಪುಸ್ತಕ, ಹೊರಗುತ್ತಿಗೆ ಶಿಕ್ಷಕರ ವೇತನ, ಸೋಪು, ನೋಟ್ ಪುಸ್ತಕ, ವಿದ್ಯುತ್, ಕಟ್ಟಡ ಬಾಡಿಗೆ, ಶೌಚಾಲಯ, ಶುಚಿತ್ವ, ಪೇನಾಯಿಲ್, ಬ್ಲೀಚಿಂಗ್ ಪೌಡರ್ ಇತ್ಯಾದಿ ಸಾಮಗ್ರಿಗಳು ಖರೀದಿಸಲು ಖರ್ಚು ಭರಿಸಲಾಗಿದೆ.

2) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಕ್ರ. ಸಂ.	ವಿವರ	2006–07	2007–08	2008–09
1)	ಬಿಡುಗಡೆಯಾದ ಹಣ	2.72	2.40	2.40
	ಖರ್ಚಾಗಿರುವ ಹಣ			
2)	ಆಹಾರ	1.75	1.82	1.73
3)	ಇತರೆ	0.225	0.225	0.250
4)	ವೇತನ	0.741	0.360	0.400

ಸಕಇ 64 ಸಮನ್ವಯ 2010

ಶ್ರೀ ಹೆಚ್.ಪಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಮೂಲವಾದ ಪ್ರಶ್ನೆ ಏನೆಂದರೆ, ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಆಶ್ರಮ ಶಾಲೆಗಳು ಬಂದಿವೆ. ಇವತ್ತು ಈಗಾಗಲೇ ಕೋಟ್ಯಾಂತರ ರೂಪಾಯಿ ಖರ್ಚು

ಮಾಡಿದ್ದಾರೆ. ಇವು ಬೇರೆ ಶಾಲೆಗಳ ಹಾಗಲ್ಲ. ಇದು ಸಂಪೂರ್ಣ Primitive tribes. ಏನು ಜೇನು ಕುರುಬರು ಇದ್ದಾರೆ, ಅವರಿಗೆ ಸಂಬಂಧಪಟ್ಟಿದ್ದು. ಇಲ್ಲಿ ಮುಖ್ಯ ಪ್ರಶ್ನೆ ಏನೆಂದರೆ, Primitive tribes ನಲ್ಲಿ ಎಷ್ಟು ಜನ SSLC ದಾಟಿದ್ದಾರೆ, ಉನ್ನತ ವ್ಯಾಸಂಗಕ್ಕೆ ಹೋಗಿದ್ದಾರೆ, ಯಾರ್ಯಾರು ಡಾಕ್ಟರ್‌ಗಳು ಆಗಿದ್ದಾರೆ, ಎನ್ನುವ ಒಂದು ಸಮೀಕ್ಷೆ ಮಾಡಬೇಕಾಗಿರುವುದು ಇಲ್ಲಿ ಬಹಳ ಮುಖ್ಯವಾಗಿದೆ. ನನಗಿರುವ ಮಾಹಿತಿ ಪ್ರಕಾರ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಪ್ರಶ್ನೆಗಳೂ ಇವೆ. ನನಗಿರುವ ಮಾಹಿತಿ ಪ್ರಕಾರ ಇವತ್ತು ಏನು ಜೇನು ಕುರುಬರು ಇದ್ದಾರೆ, ಆರರಿಂದ ಏಳು ಜನ ಉನ್ನತ ಶಿಕ್ಷಣವನ್ನು ಪಡೆದಿದ್ದಾರೆ. ಅವರೆಲ್ಲಾ ಈ ಶಾಲೆಗಳ ಮುಖಾಂತರ ಉನ್ನತ ಶಿಕ್ಷಣ ಪಡೆದವರಲ್ಲ. ಯಾರೋ sponsorers ಬಿಳಿಗಿರಿ ರಂಗನಬೆಟ್ಟದಲ್ಲಿ ಡಾ: ಸುದರ್ಶನ್‌ರವರು ಓದಿಸಿ ಒಬ್ಬರಿಗೆ ಡಾಕ್ಟರ್ ಮಾಡಿದ್ದಾರೆ. ಅದೇ ರೀತಿ ಒಬ್ಬರು ರಿಟೈರ್ಡ್ ACF ಒಬ್ಬರು ಮಾಡಿದ್ದಾರೆ. ಸರ್ಕಾರದಿಂದ ಕೋಟ್ಯಾಂತರ ರೂಪಾಯಿ ವೆಚ್ಚವಾದರೂ ಕೂಡ, ನಮ್ಮ primitive tribe ಅನ್ನು SSLC ಮಟ್ಟಕ್ಕೂ ತರುವುದಕ್ಕೆ ಸರ್ಕಾರದ ವತಿಯಿಂದ ಆಗಲಿಲ್ಲ. ನಾನು ಏಕೆ ಈ ಮೂಲ ಪ್ರಶ್ನೆ ಕೇಳಿದೆ ಎಂದರೆ, ಇವರಿಗೆ ಪಾಠ ಮಾಡುತ್ತಿರುವಂತಹ ಶಿಕ್ಷಕರಿಗೆ ಬಹಳ ಕಡಿಮೆ ಸಂಬಳ. ಅವರೇ ಒಪ್ಪಿಕೊಂಡಿದ್ದಾರೆ. ಒಬ್ಬ ಅಡಿಗೆಯವರಿಗಿಂತ ಕಡಿಮೆ ಸಂಬಳ ಬರುತ್ತಿದೆ. ಕ್ವಾಲಿಟಿ ಟೀಚರ್ಸ್ ಇಲ್ಲ. ಏತಕ್ಕೆ ಕ್ವಾಲಿಟಿ ಮತ್ತು ಕ್ವಾಲಿಫೈಡ್ ಟೀಚರ್ಸ್ ಇಲ್ಲವೆಂದರೆ, ಇವರು out sourcing ನಲ್ಲಿ ಕೊಟ್ಟಿದ್ದಾರೆ. out sourcing ಕೊಟ್ಟಿರುವುದರಿಂದ ಇವರ ಮೇಲೆ ಹಿಡಿತ ಇಲ್ಲ. ಇದರಿಂದ ಸರ್ಕಾರಕ್ಕೆ ಒಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರ ಇದ್ದಾಗ ಇದೇ ಟ್ರೈಬಲ್ ವಿಚಾರಕ್ಕೋಸ್ಕರ ಹೆಚ್.ಡಿ. ಕೋಟೆಯಲ್ಲಿ ಒಂದು ಕ್ಯಾಬಿನೆಟ್ ಮೀಟಿಂಗ್ ಮಾಡಿದರು. ಅಲ್ಲಿ ಏನು ಡಿಸಿಷನ್ ತೆಗೆದುಕೊಂಡರೆಂದರೆ, ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವಂತಹ ಈ ಆಶ್ರಮ ಶಾಲೆಗಳ . . . ಅದನ್ನು ಅವರು ಚಿಂತನೆ ಮಾಡಿ ಅನುಷ್ಠಾನಕ್ಕೆ ತರಲಿ. ಆ ಶಿಕ್ಷಕರನ್ನು ಶಿಕ್ಷಣ ಇಲಾಖೆಗೆ ವಹಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಅದನ್ನು ಅನುಷ್ಠಾನಕ್ಕೆ ತರಲಿಕ್ಕೆ ಚಿಂತನೆ ಮಾಡಲಿ ಎಂದು ನನ್ನ ಮನವಿ.

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಖಂಡಿತವಾಗಿ ಗಂಭೀರವಾಗಿ ಪರಿಶೀಲನೆ ಮಾಡಿ ಶಿಕ್ಷಕರಿಗೆ ಕಡಿಮೆ ಸಂಬಳ ಇರುವುದು ಗಮನಕ್ಕೆ ತಂದಿದ್ದಾರೆ, ಅದನ್ನು ಹೆಚ್ಚಿಸುವುದಕ್ಕೂ ಕೂಡ ನಾನು ಪ್ರಯತ್ನ ಮಾಡಿ ಜಾರಿಗೆ ತರುತ್ತೇನೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 18.03.10ರ 8ನೇ ಪಟ್ಟಿಯಿಂದ ಉತ್ತರಿಸುವ 127 ಪ್ರಶ್ನೆಗಳ ಪೈಕಿ 111 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. – ಅನುಬಂಧ – VII

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

i) ವಿಷಯ : ಅಕ್ರಮ ಗಣಿಗಾರಿಕೆ ಬಗ್ಗೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : (ಚಿಕ್ಕೋಡಿ ಸದಲಗಾ) : ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದ ಚಿಕ್ಕೋಡಿ ಸದಲಗ ಶಿರಗಾವಡಿ ಗ್ರಾಮದ ಸರ್ವೇ ನಂ 72 ಸರ್ಕಾರಿ ಜಮೀನಿನಲ್ಲಿ ಸುಮಾರು 10 ವರ್ಷಗಳಿಂದ ಸಂಜೀವ್ ವಿರೂಪಾಕ್ಷ ಗಿಂಡ್ಯೆರವರು ಸುಮಾರು ನಾಲ್ಕು ಎಕರೆ ಜಮೀನಿನಲ್ಲಿ ಗಣಿಗಾರಿಕೆ ನಡೆಸಿದ್ದು, ಅದರ ಜೊತೆಯಲ್ಲಿ ಅಧಿಕಾರಿಗಳು ಕೂಡ ಶಾಮೀಲಾಗಿದ್ದಾರೆ. ಈ ಸಂಬಂಧ ಗ್ರಾಮಸ್ಥರು ಚಿಕ್ಕೋಡಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿದ್ದರೂ ಕೂಡ ಸದರಿಯವರ ವಿರುದ್ಧ ಯಾವುದೇ ಕ್ರಮ ಜರುಗಿಸದೇ ಮೌನವಹಿಸಿದ್ದಾರೆ. ಅಲ್ಲದೆ ಈ ಸಂಬಂಧ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಅಕ್ರಮ ಗಣಿಗಾರಿಕೆ ನಿಲ್ಲಿಸಲು ಕ್ರಮತೆಗೆದುಕೊಳ್ಳದೆ ಇರುವುದನ್ನು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.